# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1590
ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 24.09.2021

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ನಂಜನಗೂಡು ತಾಲ್ಲೂಕು ದೊಡ್ಡ ಕವಲಂದೆ ಹೋಬಳಿಯ ಮಲ್ಲಹಳ್ಳಿ ಮತ್ತು ಭುಜಂಗನಹಳ್ಳಿ ಗ್ರಾಮಗಳಿಗೆ ಸಾರಿಗೆ ಸಂಸ್ಥೆಯ ಬಸ್ ಸೌಲಭ್ಯವಿಲ್ಲದೆ ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಂಜನಗೂಡು ತಾಲ್ಲೂಕಿನ ದೊಡ್ಡ ಕವಲಂದೆ ಹೋಬಳಿಯ ಮಲ್ಲಹಳ್ಳಿ ಮತ್ತು ಭುಜಂಗನಹುಂಡಿ ಗ್ರಾಮಗಳಿಗೆ ಅನುಸೂಚಿ ಸಂಖ್ಯೆ:14ರಲ್ಲಿ ನಂಜನಗೂಡಿನಿಂದ 6.30, 7.45, 15.15, 16.30 ಹಾಗೂ ಮಲ್ಲಹಳ್ಳಿಯಿಂದ 7.00, 8.15, 15.45, 17.00ಕ್ಕೆ 8 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.<br><br>ಸಾರ್ವಜನಿಕರು ಸದರಿ ಸಾರಿಗೆಗಳ ಪ್ರಯೋಜನ ಪಡೆಯುತ್ತಿದ್ದಾರೆ. |
| ಆ. | ಸುಮಾರು 7 ಸಾವಿರ ಜನಸಂಖ್ಯೆ ಇರುವ ದೊಡ್ಡ ಗ್ರಾಮವಾದ ಮಲ್ಲಹಳ್ಳಿಯಿಂದ ದೊಡ್ಡ ಕವಲಂದೆ ಮೂಲಕ ಚಾಮರಾಜನಗರಕ್ಕೆ ಮತ್ತು ಹೆಮ್ಮರಗಾಲ, ಬದನವಾಳು ಮೂಲಕ ನಂಜನಗೂಡಿಗೆ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ; | ಮಲ್ಲಹಳ್ಳಿ ಗ್ರಾಮದಿಂದ ಹೆಮ್ಮರಗಾಲ, ಬದನವಾಳು ಮಾರ್ಗವಾಗಿ ನಂಜನಗೂಡಿಗೆ ಅನುಸೂಚಿ ಸಂಖ್ಯೆ 14ರಲ್ಲಿ 8 ಸುತ್ತುವಳಿಗಳು ಕಾರ್ಯಾಚರಣೆಯಲ್ಲಿರುತ್ತವೆ.<br><br>ಅಲ್ಲದೇ, ನಂಜನಗೂಡು-ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ಬದನವಾಳು ಗ್ರಾಮವಿದ್ದು, ಸದರಿ ಗ್ರಾಮದ ಮೂಲಕ ನಿಗಮದ ವೇಗದೂತ ಹಾಗೂ ಸಾಮಾನ್ಯ ಬಸ್ಸುಗಳು ಪ್ರತಿ 10 ನಿಮಿಷಕ್ಕೊಂದರಂತೆ ಸುತ್ತುವಳಿಗಳು ಕಾರ್ಯಾಚರಣೆಯಿದ್ದು, ಎಲ್ಲಾ ಬಸ್ಸುಗಳಿಗೆ ನಿಲುಗಡೆ ಕಲ್ಪಿಸಲಾಗಿದೆ. ಮಲ್ಲಹಳ್ಳಿಯಿಂದ ಪ್ರಯಾಣಿಸುವ ಪ್ರಯಾಣಿಕರು ಬದನವಾಳುವಿನಲ್ಲಿ ಇಳಿದು ಚಾಮರಾಜನಗರ ಅಥವಾ ನಂಜನಗೂಡಿಗೆ ಪ್ರಯಾಣಿಸಬಹುದಾಗಿದೆ.<br><br>ಮಲ್ಲಹಳ್ಳಿಯಿಂದ ಚಾಮರಾಜನಗರಕ್ಕೆ ನೇರ ಪ್ರಯಾಣಿಕರ ಕೊರತೆಯಿಂದಾಗಿ ಈ ಮಾರ್ಗದಲ್ಲಿ ಪ್ರತ್ಯೇಕ ಸಾರಿಗೆ ಕಲ್ಪಿಸಿರುವುದಿಲ್ಲ. |
| ಇ. | ಕೊಳ್ಳೇಗಾಲ ತಾಲ್ಲೂಕು ಮಲ್ಲಯ್ಯನಪುರ ಗ್ರಾಮದಿಂದ ಹನೂರು, ಕೊಳ್ಳೇಗಾಲಕ್ಕೆ ಹೋಗುತ್ತಿದ್ದ ಬಸ್ ಸಂಚಾರ ಸ್ಥಗಿತವಾಗಿದ್ದು, ಈ ಗ್ರಾಮದಿಂದ ಶಾಲಾ ಕಾಲೇಜುಗಳಿಗೆ ಹೋಗುವ ನೂರಾರು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಹಾಗೂ ಖಾಸಗಿ ಕೆಲಸಕ್ಕೆ ಹೋಗುವ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಕೂಡಲೇ ಈ ಬಸ್ ಸಂಚಾರ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದೇ? | ಕೊಳ್ಳೇಗಾಲ ತಾಲ್ಲೂಕು ಮಲ್ಲಯ್ಯನಪುರದಿಂದ ಹನೂರು, ಕೊಳ್ಳೇಗಾಲಕ್ಕೆ ಅನುಸೂಚಿ ಸಂಖ್ಯೆ 7 ಎಬಿ ರಲ್ಲಿ ಹನೂರಿನಿಂದ ಸಮಯ ಬೆಳಿಗ್ಗೆ 06.45, 08.15 ಹಾಗೂ ಸಂಜೆ 17.00, 18.15ಕ್ಕೆ ಸಾರಿಗೆ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರು ಸದರಿ ಸಾರಿಗೆಗಳ ಉಪಯೋಗವನ್ನು ಪಡೆದುಕೊಳ್ಳುತ್ತಿರುತ್ತಾರೆ. |

ಸಂಖ್ಯೆ: ಟಿಡಿ 226 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು